**ದಿನಾಂಕಃ 22.09.2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – ವಾದಿ ಪರ ವಕೀಲರಿಂದ**

ನನಗೆ ವಾದಿ ಮತ್ತು ಪ್ರತಿವಾದಿಗಳ ಪರಿಚಯವಿರುತ್ತದೆ. ಅವರು ನಮ್ಮ ಸಂಬಂಧಿಕರಾಗಬೇಕು. ಸರಸ್ವತಿರವರು ರವಿನಾಯ್ಡುರವರ ತಂಗಿ ಎಂದರೆ ಸರಿ. ರವಿನಾಯ್ಡುರವರ ತಮ್ಮ ಶ್ರೀನಿವಾಸನಾಯ್ಡು ಮೃತರಾಗಿರುತ್ತಾರೆಂದರೆ ಸರಿ. ನನಗೆ ವೈಯಕ್ತಿಕವಾಗಿ ನ್ಯಾಯಾಲಯದ ಅನುಭವ ಇರುತ್ತದೆ. ಇದೇ ನ್ಯಾಯಾಲಯದಲ್ಲಿ ನಾನು ಈ ಹಿಂದೆ ಅನೇಕ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯಪ್ರಮಾಣ ಪತ್ರ ತಯಾರು ಮಾಡುವಾಗ ನಾನು ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ. ವಾದಿಯು ಯಾವ ಯಾವ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಈ ದಾವೆಯನ್ನು ಹೂಡಿರುತ್ತಾರೆಂದು ನಾನು ತಿಳಿದುಕೊಂಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ 9 ಸೈಟುಗಳ ಬಗ್ಗೆ ಬರೆಸಿರುತ್ತೇನೆಂದರೆ ಸರಿ. ಸದರಿ ಸೈಟುಗಳು ಹನೂರಿನಲ್ಲಿರುತ್ತವೆ. ಸದರಿ ಸೈಟುಗಳ ನಂಬರು ಹೇಳಲು ನನಗೆ ನೆನಪಿರುವುದಿಲ್ಲ. ಸದರಿ 9 ಸೈಟುಗಳ ದಾಖಲೆಗಳು ಮತ್ತು ಅವುಗಳು ಯಾರ ಹೆಸರಿನಲ್ಲಿರುತ್ತವೆ ಎಂದು ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಸದರಿ 9 ಸೈಟುಗಳನ್ನು ಈ ದಾವೆಯಲ್ಲಿ ದಾವಾಸ್ವತ್ತುಗಳಾಗಿ ಸೇರಿಸಿರುವ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ರಾಮಕೃಷ್ಣನಾಯ್ಡುರವರು ವಿಭಾಗ ಮಾಡಿಕೊಂಡಿರುವ ತಿಂಗಳು ಮತ್ತು ವರ್ಷ ನನಗೆ ಹೇಳಲು ಬರುವುದಿಲ್ಲ. ರಾಮಕೃಷ್ಣನಾಯ್ಡುರವರಿಗೆ ಸುಮಾರು 20 ಎಕರೆ ಜಮೀನು ಮತ್ತು ಒಂದು ಮನೆ ಇತ್ತು. ಎಷ್ಟು ಸೈಟುಗಳು ಇದ್ದವು ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯ ತಾಯಿ ಬದುಕಿದ್ದಾಗ ರವಿನಾಯ್ಡುರವರ ವಿರುದ್ಧ ದಾವೆ ಹೂಡಿದ್ದ ವಿಚಾರ ನನಗೆ ಗೊತ್ತಿರುತ್ತದೆ. ಸಾಕ್ಷಿ ಮುಂದುವರೆದು ವಾದಿಯ ಒತ್ತಾಯದ ಮೇರೆಗೆ ವಾದಿಯ ತಾಯಿ ಸದರಿ ದಾವೆಯನ್ನು ಹೂಡಿದ್ದರು ಎಂದು ನುಡಿಯುತ್ತಾರೆ. ಆ ದಾವೆಯಲ್ಲಿ ಈ ದಾವೆಯಲ್ಲಿನ 1 ನೇ ಪ್ರತಿವಾದಿಯ ಪರ ವಕೀಲರೇ ರವಿನಾಯ್ಡು ಮತ್ತು ಸರಸ್ವತಿರವರಿಗೆ ವಕೀಲರಾಗಿದ್ದರು ಎಂದರೆ ಸರಿ. ದಾವಾ ಆಸ್ತಿಗಳ ಖಾತೆ ಯಾರ ಹೆಸರಿನಲ್ಲಿರುತ್ತದೆ ಎಂದು ನಾನು ನೋಡಿರುವುದಿಲ್ಲ. ರಾಮಕೃಷ್ಣನಾಯ್ಡುರವರು ಅವರ ಮಕ್ಕಳಿಗೆ ಮೌಖಿಕ ಭಾಗವನ್ನು ಮಾಡಿಕೊಟ್ಟಂತಹ ಸ್ಥಳ ಅವರ ಮನೆಯಾಗಿರುತ್ತದೆ. ಈ ದಾವೆಯಲ್ಲಿ ವಾದಿ ಮತ್ತು ಪ್ರತಿವಾದಿಯರು ಯಾವ ಯಾವ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಸರಸ್ವತಿರವರು ಯಾವ ವರ್ಷದಲ್ಲಿ ಮದುವೆಯಾಗಿರುತ್ತಾರೆಂದು ನನಗೆ ನೆನಪಿರುವುದಿಲ್ಲ. ರಾಮಕೃಷ್ಣನಾಯ್ಡುರವರು ವಿಭಾಗ ಮಾಡಿಕೊಟ್ಟ ಬಗ್ಗೆ ಪತ್ರ ಮತ್ತು ವಗೈರೆಗಳನ್ನು ನಾನು ನೋಡಿರುವುದಿಲ್ಲ. ಈ ದಾವೆಯಲ್ಲಿ ವಾದಿ ಮತ್ತು ಪ್ರತಿವಾದಿಯರು ತಮ್ಮ ವಾದ ಪತ್ರ ಮತ್ತು ಪ್ರತಿವಾದ ಪತ್ರಗಳಲ್ಲಿ ಏನು ತಿಳಿಸಿರುತ್ತಾರೆಂದು ನಾನು ತಿಳಿದುಕೊಂಡಿರುವುದಿಲ್ಲ. ಈ ಕೇಸಿನ ಬಗ್ಗೆ ನನಗೆ ಸಂಪೂರ್ಣ ತಿಳುವಳಿಕೆ ಇರುವುದಿಲ್ಲ ಎಂದರೆ ಸಾಕ್ಷಿಯು ಸ್ವಲ್ಪ ಮಟ್ಟಿಗೆ ತಿಳುವಳಿಕೆ ಇರುತ್ತದೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ

ನಾನು ರವಿನಾಯ್ಡುರವರ ಕೋರಿಕೆಯ ಮೇರೆಗೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಆನಂದ ಎಂ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ. ಕೊಳ್ಳೇಗಾಲ.